

ಶಾಲೆಯಲ್ಲಿ ಮೊಬೈಲ್ ಮುಟ್ಟೋಲ್ಲ ಅಂತ ಶಪಥ ಮಾಡಿಸಿದ್ರು. ಈಗ ಅದನ್ನು ನೀವೂ ಮಾಡಬೇಕು

**ರೋಗಿ:** ಡಾಕ್ಟರ್ ನೀವು ನಿಮ್ಮ ವೃತ್ತಿಯಲ್ಲಿ ಎಂದಾದರೂ ತಪ್ಪು ಮಾಡಿದ್ದೀರಾ?
**ವೈದ್ಯ:** ಒಂದು ಬಾರಿ ಮಾಡಿದ್ದೆ. ಅದೂ ಒಂದೇ ಒಂದು ತಪ್ಪು.
**ರೋಗಿ:** ಯಾವ ತಪ್ಪು ಡಾಕ್ಟೆ?
**ವೈದ್ಯ:** ಕೋಟ್ಯಧೀಶರೊಬ್ಬರಿಗೆ ಕೇವಲ ಎರಡು ಇಂಜೆಕ್ಷನ್ ಮಾತ್ರ ಕೊಟ್ಟು ಗುಣಪಡಿಸಿದ್ದೆ.

50 ಕೋಟಿ ರೂ. ಅನುದಾನದಲ್ಲಿ
12.5ಕೋಟಿ ರೂ. ಶಾಸಕರ "ವಿವೇಚನೆ"ಗೆ ಬಿಟ್ಟಿದ್ದು..!!




ಬೋರ್ಡಂತು ಹಾಕ್ಸಿದೀವೀ..
ಭವನ ಕಟ್ಟಿಸೋದು ..ಬಿಡೋದು..
ನಿಮ್ಮ "ವಿವೇಚನಗೆ" ಬಿಟ್ಟಿದ್ದು ಸಾರ್..!!

**ಪಿಂಕಿ:** ನಾನು ಆಸ್ಪತ್ರೆಯಲ್ಲಿ ಇದ್ದೇನೆ. ಆಮೇಲೆ ಕಾಲ್ ಮಾತನಾಡುತ್ತೇನೆ, ಸರಿನಾ?
**ವಿಕ್ಕಿ:** ಯಾಕೆ ಏನಾಯಿತು?
**ಪಿಂಕಿ:** ನನ್ನ ತಮ್ಮ ಮಾತನಾಡುತ್ತಿಲ್ಲ, ನಡೆಯುತ್ತಿಲ್ಲ ಅದಕ್ಕೆ.
**ವಿಕ್ಕಿ:** ಅಯ್ಯೋ ಏನಾಯಿತು, ಯಾಕೆ ಹಾಗೆ ಆಗಿದೆ ನಿನ್ನ ತಮ್ಮನಿಗೆ?
**ಪಿಂಕಿ:** ಇವಾಗ ತಾನೇ ಹುಟ್ಟಿದ್ದಾನೆ. ಹುಟ್ಟಿ ಇನ್ನೂ 3 ಗಂಟೆ ಆಗಿಲ್ಲ.

ಕೊಲೆ ಆರೋಪಿಗೆ ಮದುವೆಯಾಗಲು ಪೆರೋಲ್



ಎರಡು ಬಂಧನಗಳನ್ನು ಜೊತೆಯಲ್ಲಿ ನಿಭಾಯಿಸಲು ಯಾರು ಹೆಣ್ಣು ಕೊಟ್ರೋ?

**ಗುಂಡ:** ಅಣ್ಣ ಒಂದು ಬಾಟಲ್ ನಿದ್ರೆ ಮಾತ್ರೆ ಕೊಡು.
**ಮೆಡಿಕಲ್ ಶಾಪ್‌ನವ:** ಡಾಕ್ಟರ್ ಚೀಟಿ ಇದ್ರೆ ಮಾತ್ರ ಕೊಡಬಹುದು.
**ಗುಂಡ:** ಡಾಕ್ಟರ್ ಚೀಟಿ ಇಲ್ಲ ಆದ್ರೆ ನನ್ನ ಮದುವೆ ಕಾರ್ಡ್ ಇದೆ ತೋರಿಸ್ಲಾ?
**ಮೆಡಿಕಲ್ ಶಾಪ್‌ನವ:** ದೊಡ್ಡ ಬಾಟಲ್ ಕೊಡ್ಲಾ ಅಥವಾ ಚಿಕ್ಕದು ಕೊಡ್ಲಾ?


ಸರಗಳ್ಳರಿಗೆ ಜಿರಲೆಸ್ಪ್ರೇ ಹೊಡೆದು
ಓಡಿಸಿದ ಬಾಗಲಕೋಟೆ ಗೃಹಿಣಿ



"ಕಳ್ಳರನ್ನ ಓಡಿಸೋ"..
ಆ ಜಿರಲೆ ಔಷಧಿ ಒಂದೆರಡು ಕೊಡೀ..!!




ನಂಗೆ ತಿಂಗಳಿಗೆ 4 ಲಕ್ಷ ಸಂಬಳದ ಕೆಲಸ ಬೇಡಾ ಸಾರ್... 1 ಲಕ್ಷ ಸಂಬಳದ ಕೆಲ್ಸ ಕೊಡಿ.




ಇವರು ಕೂಡ "ಇಲ್ಲಿ ಇರುವವರಿಗೆ ಮಾತ್ರ ಸ್ವಾಗತ" ಎಂದು ಒಂದೇ ವಾಕ್ಯದಲ್ಲಿ ವೆಲ್‌ಕಮ್ ಮಾಡ್ತಿದ್ದಾರೆ.

**ಸ್ವಾಮೀಜಿ:** ಜೀವನದ ಪ್ರತಿಯೊಂದು ರೇಸ್‌ನಲ್ಲಿ ನೀವೆ ಮೊದಲಿಗರಾಗಬೇಕೆಂದಿದ್ದರೆ, ಅದಕ್ಕೆ ಒಂದು ಸೀಕ್ರೆಟ್ ಇದೆ.
**ಭಕ್ತ:** ಆ ಸೀಕ್ರೆಟ್ ಯಾವುದೆಂದು ಹೇಳಿ?
**ಸ್ವಾಮೀಜಿ:** ಒಬ್ಬರೇ ಓಡಿ.

**ಹೆಂಡತಿ:** ನಾನಿಲ್ಲಿ ಪುಸ್ತಕ ಇಟ್ಟಿದ್ದೆ, ಸಿಗ್ತಾ ಇಲ್ಲ.
**ಗಂಡ:** ಯಾವ ಪುಸ್ತಕ?
**ಹೆಂಡತಿ:** ನೂರು ವರ್ಷಗಳ ಕಾಲ ಬದುಕುವುದು ಹೇಗೆ ಅನ್ನುವ ಪುಸ್ತಕವದು.
**ಗಂಡ:** ಅದಾ... ನಾನೇ ಸುಟ್ಟು ಹಾಕಿದೆ.
**ಹೆಂಡತಿ:** ಯಾಕೆ?
**ಗಂಡ:** ನಿಮ್ಮ ಅಮ್ಮ ಓದಿದ್ರೆ ಕಷ್ಟ ಅಂತ.

ಸಂಗ್ರಹ: **ಶರದ ಕುಲಕರ್ಣಿ, ಬೀದರ್**